**ಆರ್ ಎ ನಂಃ 213-14**
**ಪಿ ಡಬ್ಲ್ಯೂ ಃ 1**

**ದಿಃ 20-07-2019 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಎಂ ಆರ್ ವಕೀಲರಿಂದ**

9. ನಿಪಿ 8 ರಲ್ಲಿ ಹೇಳಿರುವ ಸ್ವತ್ತಿನ ಉತ್ತರಕ್ಕೆ ನಾರಾಯಣಸ್ವಾಮಿ, ದಕ್ಷಿಣಕ್ಕೆ ಕೃಷ್ಣಪ್ಪ, ಪೂರ್ವಕ್ಕೆ ಯರ‍್ರಪ್ಪ, ಪಶ್ಚಿಮಕ್ಕೆ ರೇವಣ್ಣರವರ ಸ್ವತ್ತುಗಳು. ಆ ಸ್ವತ್ತಿನ ಪೂರ್ವಕ್ಕೆ ಮೂಡಲಯ್ಯನ ಜಮೀನು ಇದ್ದಿದ್ದು ನನಗೆ ಗೊತ್ತಿತ್ತ ಅಂದರೆ ಸಾಕ್ಷಿ ಗೊತ್ತಿಲ್ಲ ಎಂಕು ನುಡಿಯುತ್ತಾರೆ. ನಾವು ಬರೆದುಕೊಟ್ಟ ಕ್ರಯಪತ್ರದಲ್ಲಿ ಪೂರ್ವಕ್ಕೆ ನಾರಾಯಣಸ್ವಾಮಿ ಹೆಸರೇ ಬರೆದಿದೆ ಅಂದರೆ ಸರಿ. ನಾನು ಮುನಿಯಪ್ಪರವರಿಂದ 4 ಎಕರೆ 20 ಗುಂಟೆ ಖರೀದಿಸಿರುತ್ತೇನೆ. ನಾನು ಗಾಳಪ್ಪನಿಂದ ಎಷ್ಟು ಜಮೀನು ಖರೀದಿಸಿದ್ದೇನೆಂದು ಗೊತ್ತಿಲ್ಲ. 1975-80 ರ ಪಹಣಿಯ ಕಲಂ ನಂ 12(2) ರಲ್ಲಿ ಒಟ್ಟು 3 ಎಕರೆ 1 ಗುಂಟೆ ಗಾಳಪ್ಪನ ಹೆಸರು ನಮೂದು ಇರುವ ವಿಚಾರ ಗೊತ್ತು.

10. ಫಾರಂ ನಂ 10 ರಲ್ಲಿ 3 ಎಕರೆ 1 ಗುಂಟೆ ಬದಲು, 3 ಎಕರೆ 20 ಗುಂಟೆ ಎಂದು ತಪ್ಪಾಗಿ ನಮೂದು ಆಗಿದೆ ಅಂದರೆ ನನಗೆ ಗೊತ್ತಿಲ್ಲ. ನಾನು 3 ಎಕರೆ 1 ಗುಂಟೆಯನ್ನು ಸ್ವಾಧೀನಕ್ಕೆ ಸ್ವತ್ತನ್ನು 3 ಎಕರೆ 20 ಗುಂಟೆ ಎಂದು ಕ್ರಯ ಬರೆಸಿಕೊಂಡೆ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**